# ಅವಧೂತ ಶ್ರೀ ದತ್ತಾತ್ರೇಯ ಆರಾಧಕ ರಾಜರ್ಷಿ ಶ್ರೀಜಯಚಾಮರಾಜೇಂದ್ರ ಒಡೆಯರ್

**ಡಾ. ವಿಜಯ ಭಾರತಿ**

ನಾಡಿನ ಆಳ್ವಿಕೆಯ ಗುರುತರ ಜವಾಬ್ದಾರಿಯನ್ನು ವಹಿಸಿಕೊಂಡೂ, ಕಲೆ, ಸಾಹಿತ್ಯ , ಸಂಗೀತ ಕ್ಷೇತ್ರಗಳಲ್ಲಿ – ವಿಶೇಷವಾಗಿ ಅಧ್ಯಾತ್ಮ ವಿಷಯಕವಾಗಿ ಅಸಾಧಾರಣ ತಿಳುವಳಿಕೆಯನ್ನು ಪಡೆದಿದ್ದ ಒಬ್ಬ ಅಪೂರ್ವ ಸಾಧಕರಾಗಿದ್ದರು ಮೈಸೂರು ರಾಜರಾಗಿದ್ದ ಶ್ರೀ ಜಯ ಚಾಮರಾಜೇಂದ್ರ ಒಡೆಯರ್. ಅವರ ಕೃತಿರತ್ನವೊಂದರ ಪರಿಚಯ ಹಾಗೂ ಸಂಗ್ರಹಾನುವಾದವನ್ನು ಇಲ್ಲಿ ನೀಡಲಾಗಿದೆ. ಲೇಖಕಿ ತಮ್ಮ ಬರಹಗಳ ಮತ್ತು ಉಪನ್ಯಾಸಗಳ ಮೂಲಕ ಶ್ರೀರಾಮಕೃಷ್ಣ ಭಕ್ತವೃಂದದಲ್ಲಿ ಚಿರಪರಿಚಿತರಾಗಿದ್ದಾರೆ.

ಶ್ರೀಗಂಧ ಸುಗಂಧದ ನಗರಿಯಾದ ಮೈಸೂರು ರಾಜಮನೆತನಕ್ಕೆ ಸ್ವಾಮಿ ವಿವೇಕಾನಂದರ ಪುಣ್ಯಾಗಮನ ಒಂದು ದಿವ್ಯ ಸ್ಮೃತಿ, ಮಧುರಸ್ಮೃತಿ, ಚಿರಂತನ ಸ್ಮೃತಿ ಮತ್ತು ಸುಗಂಧ ಸ್ಮೃತಿಯಾಗಿದೆ. ಇನ್ನೂ ಆಗತಾನೆ ತನ್ನ ಯೌಗಿಕಪ್ರಕಾಶದ ಪ್ರಭೆಯಿಂದ ಬೆಳಗುತ್ತಿದ್ದ ಈ ಯುವಯತಿ ಕನ್ನಡನಾಡಿನ ಪ್ರಭುವಾಗಿದ್ದ ಶ್ರೀಚಾಮರಾಜ ಒಡೆಯರ್‌ರವರ ಮನವನ್ನು ಪೂರ್ಣವಾಗಿ ಸೆಳೆದಿದ್ದರು. ಅವರ ವ್ಯಕ್ತಿತ್ವದ ಗಾಂಭೀರ್ಯ, ವಿಸ್ತೃತವಾದ ವಿದ್ವತ್ತು, ಪರವಶತೆಯನ್ನುಂಟು ಮಾಡುತ್ತಿದ್ದ ದಿವ್ಯವಾಣಿ, ಮಾನವಕೋಟಿಯ ಹಿತಕ್ಕಾಗಿ, ಶ್ರೇಯಸ್ಸಿಗಾಗಿ ತೀವ್ರವಾಗಿ ತುಡಿಯುತ್ತಿದ್ದ ಅವರ ಮಾತೃಹೃದಯ ಇವೆಲ್ಲವೂ ರಾಜರ ಹೃದಯದಲ್ಲಿ ಅಚ್ಚಳಿಯದ ಪ್ರಭಾವ ಬೀರಿತ್ತು . ಭಾರತದ ಸನಾತನಧರ್ಮದ ಹಿರಿಮೆಯನ್ನು ವಿದೇಶದಲ್ಲಿ ಅತ್ಯಂತ ಪ್ರಭಾವಯುತವಾಗಿ ಹೇಗೆ ಅಲ್ಲಿನ ಜನತೆಯ ಮುಂದಿಟ್ಟು ವಿಶ್ವಮಾನವತೆಯನ್ನು ಸಾರಬಹುದೆಂದು ಅವರು ಸುದೀರ್ಘವಾಗಿ ವಿವರಿಸಿದಾಗ, ಪ್ರಭುಗಳು ಸ್ವಾಮೀಜಿಯವರ ಮಹದಾಲೋಚನೆಯ ಮಹಾಯೋಜನೆಯ ವ್ಯಾಪ್ತಿಯನ್ನು ಪರಿಭಾವಿಸಿ ಮಂತ್ರಮುಗ್ಧರಾದರು. ಇಡೀ ಪ್ರಯಾಣದ ವೆಚ್ಚವನ್ನೆಲ್ಲ ಭರಿಸಿ ಅವರ ಕಾರ್ಯಕ್ಕೆ ನೆರವಾಗಲು ಅನುವು ಮಾಡಿಕೊಡಬೇಕೆಂದು ಕೋರಿದರು, ಸ್ವಾಮೀಜಿ ಬಹುವಿನಯದಿಂದ ಎಲ್ಲ ಭಗವಂತನ ಸಂಕಲ್ಪವನ್ನವಲಂಬಿಸಿದೆ ಎಂದರು. ಹತ್ತಾರು ದಿನಗಳ ಕಾಲ ಅವರ ಆದರದ ಆಪ್ತ ಅತಿಥಿಯಾಗಿದ್ದು ಹೊರಟಾಗ ಅವರ ದಿವ್ಯವಾಣಿಯನ್ನು ರಾಜರು ಧ್ವನಿಮುದ್ರಿಸಿಕೊಂಡರು.

ಚಿಕಾಗೋ ನಗರದ ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮೀಜಿಯವರ ದಿವ್ಯಸಂದೇಶ ಮೊಳಗಿದಾಗ ರಾಜರು ಹೃತ್ಪೂರ್ವಕವಾದ ಅಭಿನಂದನಾ ಪತ್ರವನ್ನು ಸಲ್ಲಿಸಿದರು. ಅದಕ್ಕೆ ಉತ್ತರಿಸುತ್ತಾ ಸ್ವಾಮೀಜಿಯವರು, ''ದೀನರಿಗಾಗಿ, ದುಃಖಿಗಳಿಗಾಗಿ ನಿಮ್ಮ ಹೃದಯ ತುಡಿಯುತ್ತಿರಲಿ. ಅವರ ಉದ್ಧಾರಕ್ಕೆ ನಿಮ್ಮಿಂದ ನಿರಂತರ ಸೇವೆ ಸಲ್ಲಲಿ, ಆದರಣೀಯ ರಾಜನ್, ಪರಿಮಿತವಾದ ಈ



ಬದುಕು ಲೋಕದ ತೋರಿಕೆಯ ಥಳುಕಿಗೆ ಒಳಗಾಗದೆ ಮಾನವರ ಶ್ರೇಯಸ್ಸಿಗಾಗಿ ಮೀಸಲಾಗಲಿ. ಹಾಗೆ ಬಾಳಿದವರೇ ನಿಜವಾಗಿ ಬಾಳುವವರು. ಉಳಿದವರು ಇದ್ದರೂ ಸತ್ತಂತೆ.'' ಶ್ರೀಚಾಮರಾಜರ ಒಡೆಯರ ಮೇಲೆ ಈ ಮಾತು ತೀವ್ರಪರಿಣಾಮವನ್ನುಂಟುಮಾಡಿತು. ಅವರ ನಿಃಸ್ವಾರ್ಥ ಸೇವಾ ಮನೋಭಾವಕ್ಕೆ ಮತ್ತಷ್ಟು ಚೈತನ್ಯ ನೀಡಿ ಬೆಳಕು ತುಂಬಿತು. ನರೇಂದ್ರನಾಥ ದತ್ತನಲ್ಲಿ ಶ್ರೀ ದತ್ತ ಗುರುವೇ ರಾಜನಿಗೆ ಕಾಣಿಸಿದರೆ ಆಶ್ಚರ್ಯವೇನಿಲ್ಲ!

ಅರಸು ಮನೆತನದ ಮೂಲ ಪುರುಷ 'ಯದು'. ಈ 'ಯದು' ವಂಶದ ಕುಲಗುರು ಸ್ವಾಮಿ ಶ್ರೀದತ್ತಾತ್ರೇಯ, ಜೀವನ್ಮುಕ್ತ ಅವಧೂತ ಅದ್ವೈತ ದರ್ಶನಸಿದ್ಧ–ಭೂವ್ಯೋಮ ವ್ಯಾಪ್ತಳಾದ ವಿಶ್ವಮಾತೆ ತ್ರಿಪುರಾದೇವಿಯ ಮಹಿಮೆಯನ್ನು ''ತ್ರಿಪುರಾರಹಸ್ಯದ'' ಮೂಲಕ ಪರಶುರಾಮರಿಗೆ ಬೋಧಿಸಿದ ಮಹಾಗುರು. ಈ ಪುಣ್ಯಚರಿತನ ಆರಾಧಕರು ಮೈಸೂರು ರಾಜವಂಶದವರು. ಸ್ವಾಮಿ ವಿವೇಕಾನಂದರ ಪ್ರೀತ್ಯಾದರಗಳಿಗೆ ಪಾತ್ರರಾಗಿದ್ದ ತಾತ ಚಾಮರಾಜ ಒಡೆಯರ್‌ರವರ ಉನ್ನತ ಸಂಸ್ಕಾರ, ಗುರುಭಕ್ತಿ, ಶ್ರೀ ಜಯಚಾಮರಾಜ ಒಡೆಯರ್‌ರವರಲ್ಲಿಯೂ ಉನ್ನತವಾದ ರೀತಿಯಲ್ಲಿ ಪ್ರವರ್ಧಮಾನವಾಗಿತ್ತು . ಅದ್ವೈತ ದರ್ಶನದ ಪೂರ್ಣಸ್ವರೂಪನಾದ ಗುರುಕುಲಕ್ಕೆ ಮಹಾನ್‌ಗುರುವಾದ ಶ್ರೀ ದತ್ತಾತ್ರೇಯಸ್ವಾಮಿಯನ್ನು ತಮ್ಮ ಆಂತರ್ಯದ

ಕಣಕಣದಲ್ಲಿ, ತಮ್ಮ ಬದುಕಿನ ಕ್ಷಣಕ್ಷಣದಲ್ಲಿ ಆರಾಧಿಸಿದವರು ರಾಜರ್ಷಿ ಒಡೆಯರ್‌ರವರು.

ಮೈಸೂರು ರಾಜಮನೆತನಕ್ಕೆ ಮುಕುಟಪ್ರಾಯರಾಗಿ, ಕರ್ನಾಟಕದ ಕ್ಷೇಮಾಭ್ಯುದಯದ ಚಿಂತಕರಾಗಿ, ಪ್ರಜಾವತ್ಸಲರಾಗಿ, ಕಲೋಪಾಸಕರಾಗಿ, ಸರಳ ಸಜ್ಜನಿಕೆಯ ಪ್ರತಿರೂಪವಾಗಿ, ಕನ್ನಡ ಜನತೆಯ ಗೌರವಾದರದ ಒಡೆಯರೇ ಆಗಿ ವಂದನೀಯರಾದವರು. ಅವರ ವ್ಯಕ್ತಿತ್ವದ ಘನತೆ, ವಿದ್ವತ್ತು, ವಿನಯಶೀಲತೆ, ಇಡೀ ಭಾರತದಲ್ಲಷ್ಟೆ ಅಲ್ಲದೆ, ದೇಶವಿದೇಶಗಳಲ್ಲೂ ಅಪಾರ ಕೀರ್ತಿಯನ್ನು ಗಳಿಸಿದೆ. ಸಂಗೀತಕ್ಷೇತ್ರದಲ್ಲಿ ಕೃತಿಕಾರರಾಗಿ, ನಾದೋಪಾಸಕರಾಗಿ ನಾದಯೋಗಿಯಾಗಿ, ಪೂಜನೀಯರಾಗಿದ್ದಾರೆ. ತಮ್ಮ ಐವತ್ತೈದು ವರ್ಷಗಳ ಅಲ್ಪಾವಧಿಯ ಜೀವಮಾನದಲ್ಲಿ ಪರಮಾವಧಿಯ ಯೋಗಿರಾಜರಾಗಿ, ಎಲ್ಲ ರಾಜವೈಭವದ ನಡುವೆಯೂ, ಯೋಗವೈಭವವನ್ನು ಬೆಳಗಿದ ಅತ್ಯಂತ ಅಪರೂಪದ ಪುಣ್ಯಪುರುಷರು. ಇಂತಹ ಮಹಾನುಭಾವರ ಶತಮಾನೋತ್ಸವ ವರ್ಷದಲ್ಲಿ ಅವರಿಗೆ ನಮ್ಮ ದಿವ್ಯಸ್ಮೃತಿಯ ಭಾವಕುಸುಮಾಂಜಲಿಯನ್ನು ಸಲ್ಲಿಸಬೇಕಾದುದು ಕನ್ನಡಿಗರಾದ ನಮ್ಮೆಲ್ಲರ ಮುಂದಿರುವ ಆದ್ಯಕರ್ತವ್ಯ.

ಹಲವಾರು ಉನ್ನತ ಕ್ಷೇತ್ರಗಳಲ್ಲಿ ಸತ್ವಸಂಪನ್ನವಾದ ಅವರ ಪರಮಶ್ರೇಷ್ಠ ವ್ಯಕ್ತಿತ್ವ ಬೆಳಗಿದೆ. ಇಲ್ಲಿ ಪ್ರಸ್ತುತ ಲೇಖನದಲ್ಲಿ ಅವಧೂತ ಶ್ರೀ ದತ್ತಾತ್ರೇಯ ಸ್ವಾಮಿಯ ಉಪಾಸಕರಾಗಿ, ಆರಾಧಕರಾಗಿ ಒಡೆಯರ್‌ರವರು ನಡೆಸಿದ ಸಾಧನೆ, ಪಡೆದ ದರ್ಶನ ಸಿದ್ಧಿಯನ್ನಷ್ಟೆ ಚಿಂತನಾರ್ಚನೆಯಾಗಿ ಸಲ್ಲಿಸಲಾಗಿದೆ. ಅವರದೇ ಕೃತಿಯಾದ 'ಶ್ರೀದತ್ತಾತ್ರೇಯ' (ಮಾರ್ಗ ಮತ್ತು ಧ್ಯೇಯ) ಅಪೂರ್ವವಾದ ಕೃತಿ. ಅಲ್ಲಿ ಕಾಣಬರುವ ಶೈಲಿ, ರಸಾರ್ದ್ರತೆ, ಭಕ್ತಿತನ್ಮಯತೆ, ಭಕ್ತರಿಗೆಲ್ಲ ಪರಮಪ್ರಸಾದವೇ ಆಗಿದೆ. ಸಾಧಕರಿಗೆ ಇದು ಕೈದೀಪವೂ ಹೌದು. ಶಿರೋದೀಪವೂ ಹೌದು. ಶ್ರೀರಾಮಕೃಷ್ಣ ಪರಮಹಂಸರ ದರ್ಶನಸಿದ್ಧಿಯ ಯೌಗಿಕ ಹರಿವಿನಲ್ಲಿ ಜೀವನ್ಮುಕ್ತನ, ಅವಧೂತನ ಯೌಗಿಕ ಮನೋಭೂಮಿಕೆಯ ಹರಿವಿದೆ. ಭೂವ್ಯೋಮವ್ಯಾಪ್ತಳಾದ ತ್ರಿಪುರಾದೇವಿಯ ಸ್ವರೂಪ ದರ್ಶನದ ಹರಿವಿದೆ. ಆ ಹಿನ್ನೆಲೆಯಲ್ಲಿ ಈ ಕೃತಿಚಿಂತನೆ ಇನ್ನಷ್ಟು ಆಪ್ಯಾಯಮಾನವಾಗುತ್ತದೆ.

ಇಡೀ ಕೃತಿಯ ಸ್ವರೂಪವನ್ನಾಗಲೀ, ವಿಷಯವ್ಯಾಪ್ತಿಯನ್ನಾಗಲಿ, ನಿರೂಪಿಸುವುದು ನನ್ನ ಲೇಖನದ ಉದ್ದೇಶವಾಗಿಲ್ಲ. ಜೀವನದ ತತ್ತ್ವ ಶೋಧಕರಾಗಿ, ಆರಾಧಕರಾಗಿ ಒಡೆಯರ್‌ರವರಲ್ಲಿ ಕಾಣಬರುವ ಸಾಧನಾನಿಷ್ಠೆಯ ಮಹತ್ವ, ಶ್ರೀದತ್ತತತ್ತ್ವ ದರ್ಶನದ ಪ್ರಶಾಂತ ಪ್ರಕಾಶದ ಉಜ್ವಲತೆ ಈ ದಿವ್ಯಾನುಭವವನ್ನೆಲ್ಲ ಅವರ ಋಷಿವಾಣಿಯ ಬೆಳಕಿನಲ್ಲಿಯೇ ದರ್ಶಿಸಿ ಶ್ರೀದತ್ತನ ದಿವ್ಯಕೃಪೆಯನ್ನು ಪಡೆದು ಧನ್ಯರಾಗಬೇಕೆನ್ನುವುದಷ್ಟೆ ಈ ಅಕ್ಷರಾರ್ಚನೆಯ ಸೇವೆಯ ಉದ್ದೇಶ.

* * *

## ರಾಜರ್ಷಿಯ ಋಷಿವಾಣಿ

### ಪ್ರೇರಕನಾಗಿ, ಕಾರಕನಾಗಿ ಶ್ರೀದತ್ತ :

ಶ್ರೀದತ್ತಾತ್ರೇಯ ಪರಂಜ್ಯೋತಿಯನ್ನು ಮೊದಲಿಗೆ ತೋರಿದವರು ನನ್ನ ಮಾತೋಶ್ರೀ ಕೆಂಪುಚೆಲುವ ರಾಜಮ್ಮಣ್ಣಿಯವರು. ಅವನಲ್ಲಿ ಭಕ್ತಿಶ್ರದ್ಧೆಗಳನ್ನು ಮೂಡಿಸಿದವರು ಮಾತಾಮಹಿಯಾದ ಶ್ರೀಮತಿ ಆದಿರಾಜ ಅರಸು, ಅವರು. ನಮ್ಮ ಮನೆತನದಲ್ಲಿ ಪರಂಪರೆಯಿಂದ ಬಂದ ಸಂಪ್ರದಾಯದಂತೆ ಉಪದೇಶಿತವಾದ ಧ್ಯಾನಶ್ಲೋಕ ಅವಧೂತ ಗೀತೆಯ ಪ್ರಥಮ ಶ್ಲೋಕ:

**''ಈಶ್ವರಾನುಗ್ರಹಾದೇವ ಪುಂಸಾಂ ಅದ್ವೈತವಾಸನಾ ।**
**ಮಹದ್ಭಯ ಪರಿತ್ರಾಣಾದ್ವಿಪ್ರಾಣಾಮುಪಜಾಯತೇ ॥''**

ಈ ಶಬ್ದಗಳಿಗೆ ವ್ಯವಹಾರಾರ್ಥವಷ್ಟೇ ಅಲ್ಲದೆ ಆಂತರ್ಯದಲ್ಲಿ ಯೌಗಿಕಾರ್ಥವೂ ಇರುತ್ತದೆ. ಈಶ್ವರಾನುಗ್ರಹದಿಂದ ಹೊಳೆವ ಸ್ಫುರಣೆ ಅದು. ಅದು ಪ್ರಾಪ್ತವಾದಗಲೇ ಮಂತ್ರದ್ರಾಷ್ಟಾರರು ಪಡೆದ ಪರಮಾರ್ಥನಿಧಿಗೆ ನಾವು ಉತ್ತರಾಧಿಕಾರಿಯಾಗುತ್ತೇವೆ.

ಈ ಬದುಕು ಎಂದರೇನು? ಈ ಸಾವು ಎಂದರೇನು? ಮಹಾಭಯ ಎನ್ನುವುದೇನು? ಜ್ಞಾನಿ ಯಾರು? ಅವರು ಹೇಗೆ ಶ್ರೇಷ್ಠರಾಗುತ್ತಾರೆ? ಅವರಿಗೆ ಆ ಮಹಾಸತ್ಯ ಪ್ರಾಪ್ತವಾಗುವುದು ಹುಟ್ಟಿನಿಂದಲೆ? ಅಥವಾ ಸ್ವಪ್ರಯತ್ನದಿಂದಲೇ? ಈಶ್ವರಾನುಗ್ರಹ ಎಂದರೇನು? ಈ ಈಶ್ವರ ಯಾರು? ಎಂತಹವನು? ಈ ಎಲ್ಲ ಹತ್ತಾರು ಪ್ರಶ್ನೆಗಳು ಪ್ರಬಲವಾಗಿ ನನ್ನಲ್ಲಿ ಉಗಮಿಸಿತು.

ಈ ಬದುಕಿಗೆ ಅರ್ಥವೇನು? ಇದರ ನೆಲೆಯೇನು? ಇದರ ಸಾರ್ಥಕತೆ ಹೇಗೆ? ಎಂಬ ಪ್ರಶ್ನೆಗಳು ನನ್ನಲ್ಲಿ ಬಲವಾಯಿತು. ಉತ್ತರ ತಿಳಿಯುವ ಹಂಬಲ ತೀವ್ರವಾಯಿತು.

ಬದುಕಿನಲ್ಲಿ ನಮಗೆದುರಾಗುವ, ನಮ್ಮನ್ನು ಕಾಡುವ ದುಃಖ ದುಮ್ಮಾನಗಳು, ಕಷ್ಟನಷ್ಟಗಳಷ್ಟೆ ನಮ್ಮನ್ನು ನಲುಗಿಸುವುದಿಲ್ಲ. ನಾವು ಅವನ್ನು ಕಾಣುವ ದೃಷ್ಟಿ, ತಿಳಿಯುವ ಮನೋಧರ್ಮ ಎದುರಿಸುವ ಸಾಮರ್ಥ್ಯ ಇವು ಸರಿಯಾದ ರೀತಿಯಲ್ಲಿಲ್ಲದಿರುವುದೇ ಎಲ್ಲ ಬಳಲಿಕೆಯ ಮೂಲ, ಎಂಬ ಸತ್ಯ ನನಗೆ ಅರಿವಾಯಿತು. ಹೊಸ ತಿಳಿವು ಹೊಳೆಯಿತು. ಅವಿವೇಕ, ಅವಿಚಾರ, ಅನುಚಿತ ನಡತೆ ನಮ್ಮ ಎಲ್ಲ ಕಷ್ಟನಷ್ಟಗಳಿಗೆ, ಕ್ಲೇಶಗಳಿಗೆ ಮುಖ್ಯ ಕಾರಣ. ಸಂಕುಚಿತ ಮನೋಭಾವದಿಂದ ದೂರವಾಗಿ, ಸರ್ವಾತ್ಮ ವ್ಯಾಪ್ತದೃಷ್ಟಿಭಾವವನ್ನು ಪಡೆದಾಗಲೇ ಶಾಂತಿ, ಸೌಖ್ಯ. ಆಗ ಯಾವ ಪ್ರಪಂಚ ನಮ್ಮನ್ನು ಮರುಳು ಮಾಡಿ ಸೆಳೆಯುವುದೊ ಅದೇ ನಮ್ಮನ್ನು ಅರಳಿಸುತ್ತದೆ.

### ಈಶ್ವರಾನುಗ್ರಹದ ಯೌಗಿಕಪ್ರಕಾಶದ ಅರುಣೋದಯ:

ಈಶ್ವರಾನುಗ್ರಹ ಯಾವರೀತಿ ಆಗುತ್ತದೆ, ಅದು ಹೇಗೆ ಕಾರ್ಯರೂಪ ತಾಳುತ್ತದೆ ಹೇಳಲಾಗುವುದಿಲ್ಲ. ಅದು ಪೂರ್ಣ

ವಾಗಿ ಭಗವಂತನ ಅಧಿಕಾರಕ್ಕೆ ಒಳಪಟ್ಟಿರುವ ವಿಷಯ. ಜೀವನದ ಸಾರ್ಥಕತೆ ಹೇಗೆ ಎಂಬ ಪ್ರಶ್ನೆ ನನ್ನಲ್ಲಿ ಬಲವಾದಾಗ ಉತ್ತರ ತಿಳಿಯುವ ಹಂಬಲವೂ ತೀವ್ರವಾಯಿತು. ಆಗ ಋಷಿನೆಲೆಯೊಂದೇ ನನಗೆ ಸರ್ವಸ್ವವಾಯಿತು. ಜ್ಞಾನಿಗಳ ಸಾನ್ನಿಧ್ಯ, ಸಾಹಚರ್ಯ, ಸಹಯೋಗ ನನ್ನ ಸಾಧನಾಪಥದಲ್ಲಿ ನನ್ನನ್ನು ಮುನ್ನಡೆಸಿತು. ನನ್ನ ಸಂಕಲ್ಪಶಕ್ತಿಗೆ ಪೂರ್ಣಶಕ್ತಿಯನ್ನು ಅನುಗ್ರಹಿಸಿತು. ಅವರ ಜೀವನದ ಸಮಸ್ಯೆಗಳನ್ನು ಅವರು ಪರಿಹರಿಸಿಕೊಂಡ ರೀತಿ, ಅವರ ನಡೆನುಡಿಗಳ ನಿಲುವು ನನ್ನ ಮೇಲೆ ತೀವ್ರ ಪರಿಣಾಮವನ್ನುಂಟುಮಾಡಿತು. ಮುನ್ನಡೆವ ದಿವ್ಯಸ್ಫೂರ್ತಿ ನೀಡಿತು. ಋಣತ್ರಯಗಳಲ್ಲಿ ಋಷಿಋಣವೇ ಪ್ರಥಮ. ಆದರಿಂದಲೇ ದ್ವಿಜತ್ವ. ಅದರ ಋಣದಿಂದ ಇನ್ನೆರಡು ಋಣಗಳಾದ ದೇವ ಋಣ ಪಿತೃಋಣವನ್ನು ಸೂಕ್ತವಾದ ರೀತಿಯಲ್ಲಿ ನಾವು ನಿರ್ವಹಿಸಬಲ್ಲೆವು. ಋಷಿಋಣ ಸಮರ್ಪಣೆಯೇ ನಮ್ಮ ಜೀವನವನ್ನು ಆಳುವ ಪರಮತತ್ತ್ವ.

ಸಮ್ಯಗ್ ಜೀವನಕ್ಕೆ ಆಧಾರವಾದುದು ಏಕಾತ್ಮಐಕ್ಯತ್ವ. ಅದರ ಪ್ರಾಪ್ತಿಗೆ ಅವಶ್ಯವಾದ ಚಿತ್ತವೃತ್ತಿ ನಮ್ಮಲ್ಲಿರಬೇಕು. ಈಶ್ವರಾನುಗ್ರಹವಾದಾಗ ಅದರ ಮಹತ್ತನ್ನು ಗುರುತಿಸುವ ಮತ್ತು ಅದರ ಗುಪ್ತಸಂಚಲನವನ್ನು ತಿಳಿಯುವ ಮನೋಧರ್ಮ ನಮ್ಮಲ್ಲಿರಬೇಕು. ಮರ್ತ್ಯಾತೀತ ಚೇತನರೊಂದಿಗೆ ನಿರಂತರ ನಿತ್ಯಸಂಪರ್ಕದಲ್ಲಿರುವ ಮನೋಭೂಮಿಕೆ ಇರಬೇಕು. ತೋರಿಕೆಯ ತೊಡಕನ್ನೆಲ್ಲ ತೊರೆದು, ಅಂಟುನಂಟುಗಳಿಂದ ದೂರವಾಗಿ, ಮರೆವಿನ ಮಬ್ಬುಗತ್ತಲೆಯಿಂದ ಪಾರಾಗಿ, ಪ್ರತಿಕೂಲ ಸಂದರ್ಭಗಳನ್ನೆಲ್ಲ ಪೂರ್ತಿಯಾಗಿ ದಾಟಿದಮೇಲೆ ಸಾಧಕನಲ್ಲಿ ಆತ್ಮಪ್ರಸನ್ನತೆ, ಸಮದೃಷ್ಟಿ, ಚಿತ್ತಶಾಂತಿ ಪ್ರಾಪ್ತವಾಗುತ್ತದೆ.

ಮಹಾಚೈತನ್ಯದಲ್ಲಿ ಐಕ್ಯಾನುಭವ ಪಡೆಯಬೇಕೆಂಬ ಸತತವಾದ ತುಡಿತದಿಂದ ಅಂತರಂಗದಲ್ಲಿ ಅಂತರ್‌ಬೋಧೆಯನ್ನು ಉಂಟುಮಾಡುವ ಯೌಗಿಕ ಋಷಿಪ್ರತಿಭೆ ಮೂಡುತ್ತದೆ. ಮಾನವಭಾವ ದೈವಭಾವವಾಗಿ ಅರಳುತ್ತದೆ. ನಮ್ಮ ಋಷಿಗಳಿಗೆ ಅವರು ತಮ್ಮ ಏಕಾಂತದಲ್ಲಿ ಮಾಡಿದ ಸಾಧನೆಯಿಂದಲೇ ಅವರ ಜ್ಞಾನನೇತ್ರ ತೆರೆದುಕೊಂಡಿತು. ಏಕಾಂತ ಬೇಸರ ತರಿಸುವ ಒಂಟಿತನವಲ್ಲ. ಎಲ್ಲೆಲ್ಲೂ ಎಲ್ಲದರಲ್ಲೂ ದಿವ್ಯಾತ್ಮವನ್ನು ಕಾಣುವ ದಿವ್ಯಾನುಭವ. ತಾರಕಶಕ್ತಿ ಗೋಚರಿಸುವುದು ಏಕಾಂತದಲ್ಲಿ. ಜೀವ ಊರ್ಧ್ವಗಾಮಿಯಾಗುವುದು ಏಕಾಂತದಲ್ಲಿ. ಪರಮಾತ್ಮನ ಚಿತ್ಪ್ರಕಾಶದಲ್ಲಿ ಮೀಯುವುದು ಏಕಾಂತದಲ್ಲಿ. ಚಿತ್ತಸಂಸ್ಕಾರದ ಪರಿಪಕ್ವತೆಯೇ ಋಷಿಪ್ರತಿಭೆ. ಈಶ್ವರಾನುಗ್ರಹದ ಪೂರ್ಣ ಜ್ಞಾನದ ಬೋಧೆಯ ಬೆಳಕು ಸ್ಫುರಿಸುವುದು ಈ ನೆಲೆಯಲ್ಲೇ.

ನನ್ನ ಅಂತರಾಳದಲ್ಲಿ ಪದೇ ಪದೇ ಮೇಲೇಳುತ್ತಲೇ ಇದ್ದ ಜೀವಾತ್ಮ-ಪರಮಾತ್ಮ ಸಂಬಂಧದ ನಿಗೂಢತೆಯ ಪ್ರಶ್ನೆಗಳು ಪ್ರಬಲವಾಗಿ ಸಂಚಲನಗೊಂಡು ಉತ್ತರಕ್ಕಾಗಿ ತೀವ್ರವಾಗಿ ಹಂಬಲಿಸಿತು. ಅವಿರತವಾಗಿ ಈ ಚಿಂತನೆಯ ಮಂಥನ ನಡೆಯುತ್ತಿದ್ದಾಗ ಒಮ್ಮಿಂದೊಮ್ಮಗೇ ನನ್ನ ಪ್ರಯತ್ನವೇನೂ ಇಲ್ಲದೆ ತಾನೇತಾನಾಗಿ ವಿದ್ಯುತ್ ಪ್ರಕಾಶವೊಂದು ಬೆಳಗಿತು! ನನ್ನ ಅಂತರಂಗದ ಮೂಲೆಮೂಲೆಗಳಲ್ಲಿದ್ದ ಎಲ್ಲ ಸಂಶಯಗಳೂ ಇಲ್ಲವಾದವು! ಪರಿವರ್ತನೆಯ ಪ್ರಚಂಡ ಮಾರುತದೆದುರು ಎಲ್ಲ ಶಂಕೆಗಳೂ ಹಾರಿಹೋದವು. ನನ್ನ ಆಂತರ್ಯವೆಲ್ಲ ಪರಮ ಪ್ರಕಾಶದಿಂದ ಪ್ರಜ್ವಲಿಸಿತು. ಪರಮಾನಂದದ ಮಹಾಂತರಂಗ ನನ್ನನ್ನಾವರಿಸಿ ನನ್ನಂತರಂಗವೆಲ್ಲ ತರಂಗಮಯವಾಯ್ತು. **''ಸತ್ಯಂ-ಜ್ಞಾನಂ-ಅನಂತಂಬ್ರಹ್ಮ''** ಇದೇ ದತ್ತನ ತ್ರಿಮೂರ್ತಿ ಸ್ವರೂಪ, ಏಕೈಕ ಪರಬ್ರಹ್ಮ ಸ್ವರೂಪ ಎಂಬ ಬೋಧೆ ಉಂಟಾಯಿತು. ಈ ಗೂಢಾರ್ಥಬೋಧೆಯಲ್ಲಿ ಒಂದು ಹೊಸ ಅರ್ಥ, ವಿನೂತನ ಉದ್ದೇಶ ವಿದ್ಯುಲ್ಲತೆಯಂತೆ ಹೊಳೆಯಿತು.

ನಾವು ನಿಜವಾಗಿ ಯಾವುದಲ್ಲವೋ, ನಾವು ನಿಜವಾಗಿ ಏನಾಗಿದ್ದೇವೋ ಆ ನೆಲೆ, ಆ ಸ್ವರೂಪ ಅತ್ಯಂತ ಪರಿಶುದ್ಧವಾದುದು ಪವಿತ್ರವಾದುದು, ಪ್ರಶಸ್ತವಾದುದು. ತನ್ನ ಇರವಿನ ಈ ಬಹು ಎತ್ತರದ ನೆಲೆಗೆ ತಾನೇರಬಲ್ಲೆನೆಂಬ ಹಿರಿದಾದ ಅರಿವೇ ಅದ್ವೈತ ದರ್ಶನ. ಇದೇ ದತ್ತಾನುಗ್ರಹದಿಂದ ಲಭಿಸುವ ಪರಮಫಲ! ಇದೇ ಜಗತ್ತಿನ ಜನಜೀವನಕ್ಕೆ ದತ್ತ ನೀಡಿದ ಮಹತ್ತರವಾದ ಸಂದೇಶ! ಇದೇ ದತ್ತ ತೋರಿದ ಹಾದಿ! ಇದೇ ದತ್ತ ಇರಿಸಿದ ಗುರಿ!

## ಶ್ರೀದತ್ತನ ವಿಶ್ವರೂಪದರ್ಶನದ ಅನುಸಂಧಾನ:

ಭಗವಂತ ದತ್ತರೂಪದಲ್ಲಿ ಅವತರಿಸಿ ಭುವಿಗೆ ಬಂದ ಮಹಿಮೆಯನ್ನು ಧ್ಯಾನ ಮಾಡುವುದಕ್ಕಿಂತ ಸೊಗಸು ಇನ್ನಾವುದಿದೆ? ನಲಿವು ಇನ್ನಾವುದಿದೆ? ಮಾಯೆಯ ಆವರಣದಿಂದ ಮುಕ್ತನಾಗಿ ಆತ್ಮಪ್ರಕಾಶದ ನೆಲೆಯಲ್ಲಿ ನಿಂತು ಲೋಕಹಿತಕ್ಕಾಗಿ ದಿವ್ಯಜ್ಞಾನವನ್ನು ನೀಡಬಲ್ಲ ಜ್ಞಾನಶ್ರೇಷ್ಠ ಜೀವನ್ಮುಕ್ತ! ಯಾರು ತನ್ನಲ್ಲಿ ತಾನು ಸದಾ ಮಿಂದಿರುತ್ತಾನೊ, ಯಾರು ಎಲ್ಲರೊಂದಿಗೆ ಒಂದೇ ಪ್ರೇಮಭಾವದಿಂದ ಇರುತ್ತಾನೊ, ಯಾರು ತನ್ನ ಆತ್ಮವನ್ನೇ ಇತರರಲ್ಲಿಯೂ ಕಾಣುತ್ತಾನೋ ಅವನೇ ಅವಧೂತ. **''ಅಕ್ಷರಃ-ವರೇಣ್ಯಃ-ದೂತಚಿತ್ತಃ, ತತ್ವವೇತ್ತಃ''** ಇದೇ ಅವಧೂತ ದತ್ತನ ದಿವ್ಯವಾಣಿ.

ಸಾಧನಾ ನಿಷ್ಠೆಯಿಂದ ದತ್ತಾನುಗ್ರಹ ಪ್ರಾಪ್ತವಾಗಿ ಮನಸ್ಸು-ಬುದ್ಧಿ-ಚಿತ್ತ ಸೂಕ್ಷ್ಮವಾಗುತ್ತದೆ. ಪಕ್ವವಾಗುತ್ತದೆ, ವ್ಯಾಪ್ತವಾಗುತ್ತದೆ. ನಿರಂತರ ಅನುಸಂಧಾನದಿಂದ ಶಾಶ್ವತವಾಗಿ ಸಮ್ಯಕ್ ಪ್ರಕಾಶ ಬೆಳಗುತ್ತದೆ.

ದ್ವೈತಾದ್ವೈತದ ಸಮರಸಭಾವದ ಸಾರಸ್ವರೂಪವಾಗಿ ಬೆಳಗುತ್ತಿರುವ ದಿವ್ಯಸ್ವರೂಪ ಯಾವುದು ಎಂದು ನನ್ನ ತತ್ತ್ವಾನ್ವೇಷಕ ಚಿತ್ತ ಶೋಧಿಸುತ್ತಿದ್ದಾಗ ನನ್ನ ಮನದಲ್ಲಿ ಮೂಡಿದವನು ಶ್ರೀದತ್ತ. ಪರತತ್ತ್ವದ ಪೂರ್ಣದರ್ಶನ, ಪರತತ್ತ್ವದ ಪೂರ್ಣಜ್ಞಾನ

ಎಂಬುದು ಒಂದು ಭಾವವಲ್ಲ ಅದೊಂದು ಅವಿಚ್ಛಿನ್ನ ಪ್ರವಾಹ, ದತ್ತದೃಷ್ಟಿ ಸಮದೃಷ್ಟಿ ದತ್ತಬೋಧೆ ಸಮರಸಬೋಧೆ. ಆಶ್ಚರ್ಯ –ಆನಂದಗಳ ದಿವ್ಯಾನುಭವದ ಸಂಯುಕ್ತ ಸ್ತೋತ್ರವಾಗಿ ಸಮ ರಸ ಚಿತ್ತದ ಸಮಾಹಿತಚಿತ್ತದ, ಪ್ರಸಾದವೇ ಶ್ರೀದತ್ತಬೋಧೆ. ದತ್ತನ ಅದ್ವೈತ ದರ್ಶನ ವ್ಯಾಸಂಗಕ್ಕೆ, ವ್ಯಾಖ್ಯಾನಕ್ಕೆ ನಿಲುಕುವ ವಿಷಯವಲ್ಲ ಅಧ್ಯಯನ, ಅನುಸಂಧಾನ ಮತ್ತು ಅನುಷ್ಠಾನಕ್ಕೆ ಮಾತ್ರ ಅನುಭವಗೋಚರವಾಗುವ ದರ್ಶನ.

ಇಂಥ ಒಂದು ದಿವ್ಯಾನುಭವಕ್ಕೆ ಭದ್ರಬುನಾದಿಯನ್ನು ಸೃಷ್ಟಿಸಿ, ಮುನ್ನಡೆಸುವವನೂ **ಮಹಾಗಾರುಡಿಗನಾದ** ಆ ದತ್ತನೆ! ಸತ್ಯ–ಸೌಂದರ್ಯ–ಆನಂದ ಇವು ಮೂರು ಧಾರೆಯಾದರೂ ಮೂಲ ಒಂದೇ, ಒಂದನ್ನುಳಿದು ಇನ್ನೊಂದಿಲ್ಲ! ಅವಧೂತಗೀತೆ ಮತ್ತು ಜೀವನ್ಮುಕ್ತಗೀತೆ ದತ್ತಗುರುವಿನ ಈ ಎರಡೂ ಗೀತೆಗಳೂ ಅತ್ಯುನ್ನತ ತತ್ತ್ವದರ್ಶನವನ್ನು ಅತ್ಯಂತ ಸರಳರೀತಿಯಲ್ಲಿ ಬೋಧಿಸಿ ರುವ ರೀತಿ–ಅಚ್ಚರಿಯನ್ನು ಮೂಡಿಸುತ್ತದೆ. ಪ್ರಾರಂಭದ ಹಂತ ದಲ್ಲಿರುವ ಸಾಧಕನೂ ಇದರ ಅಂತರಾರ್ಥವನ್ನು ಗ್ರಹಿಸಬಲ್ಲ.

ಸಕಲ ತತ್ತ್ವಗಳ ಮೂಲನಿಧಿ ದತ್ತಾತ್ರೇಯ ತತ್ವ. ಸಕಲ ಶಕ್ತಿ ಗಳ ಮಹಾನಿಧಿ ಅವನ ಬೋಧೆ. ಸಕಲ ತಪಸ್ಸು, ಸಕಲಧ್ಯಾನ, ಸಕಲ ಯೋಗಗಳ ಸಾಕಾರಮೂರ್ತಿ ಶ್ರೀದತ್ತ. ಎಲ್ಲವನ್ನೂ ಬೆಳಗಿ ಸುವ ಪರಂಜ್ಯೋತಿ. ಅವಿರತವಾದ ಧ್ಯಾನಧಾರೆಗೆ, ತಪಧಾರೆಗೆ, ವ್ರತಧಾರೆಗೆ ತನ್ನನ್ನು ತಾನೇ ತೆತ್ತುಕೊಂಡವನು ಶ್ರೀದತ್ತ. ದತ್ತಾತ್ರೇಯ ಅಮೃತರಸ, ಎಲ್ಲ ಮಧುರರಸಗಳ ಸಾರಸ್ವರೂಪ, ಜಗದ್ರಸ, ಜಗದತೀತರಸ.

### ಕೃತಿ ಸಮರ್ಪಣೆಯ ಧನ್ಯತೆ:

ಅಜ್ಞಾನದ ನೆಲೆಯಿಂದ ಮೇಲೇರಿ, ಸತ್ಯ ಸ್ವರೂಪದ ದರ್ಶನ ಸಾಮರ್ಥ್ಯವನ್ನು ಪಡೆಯಲು ಕೈಗೊಂಡ ಪ್ರಯತ್ನದ ಫಲ ಈ ಕೃತಿ. ಈ ಪ್ರಯತ್ನಕ್ಕೆ ಈಶ್ವರಾನುಗ್ರಹವೇ ಸ್ಫೂರ್ತಿ, ದತ್ತನ ಚಿತ್ತವೇ ನನ್ನ ಲೇಖನಿಯನ್ನು ನಡೆಸಿದೆ. ಕೃತಿರಚನೆಯ ಸಮಯ ದಲ್ಲಿ ಕೃತಿಕಾರನಿಗೆ ಅವನ ಸಾಮರ್ಥ್ಯದ ಇತಿಮಿತಿಯ ಅರಿವಾ ಯಿತು. ಇಲ್ಲಿರುವುದೆಲ್ಲ ಅವನಿರಿಸಿರುವ ಸತ್ವವೇ. ಗುರುದತ್ತಾ ತ್ರೇಯ ದಾರಿಯೂ ತಾನೇ ಆಗಿ, ಗುರಿಯೂ ತಾನೇ ಆಗಿ ಭಕ್ತ ರನ್ನು ಉದ್ಧರಿಸುತ್ತಾನೆ.

ನಾನು ಕೈಗೊಂಡಿರುವ ಕೃತಿರಚನೆಯ ಈ ಕಾರ್ಯ ಸುಲಭ ವಲ್ಲ. ಆದರೆ ನಾನು ತಿಳಿದಿದ್ದನ್ನು, ತಿಳಿಯಬೇಕೆನ್ನುವ ಹಂಬಲ ವಿರುವವರಿಗೆ ತಿಳಿಸಬೇಕೆಂಬ ತವಕ ನನ್ನಲ್ಲಿ ತುಡಿಯುತ್ತದೆ. ಈಶ್ವ ರಾನುಗ್ರಹದ ದೈವಿಕ ಆನಂದ ನನ್ನ ಅಂತರ್ಯವನ್ನೆಲ್ಲ ತುಂಬಿ, ಉಕ್ಕಿ ಹೊರಸೂಸಬೇಕೆಂದು ತವಕಿಸುತ್ತದೆ. ಆ ತುಡಿತ, ತವಕಗಳೇ ತೀವ್ರವಾಗಿ ಈ ಕೃತಿ ರೂಪುಗೊಂಡಿದೆ. ನನ್ನ ಸಾಧನೆಯ ಕಾಲ ದಲ್ಲಿ ನನ್ನಲ್ಲಿ ಅವತರಿಸಿ, ಚಿಂತನೆಗಳನ್ನು ಉದ್ದೀಪಿಸಿ, ವಾಕ್ ಸರಣಿಯ ಅಕ್ಷರರೂಪ ತಾಳುವಂತೆ ಮಾಡಿದವನೂ ಶ್ರೀದತ್ತನೇ.

**ಸೋಽಹಂ** ಜಪಯಜ್ಞದ ಮೂಲಕ ಶ್ರೀದತ್ತನನ್ನು ಆರಾಧಿಸಿ, ಜೀವನ್ಮುಕ್ತ, ಅವಧೂತ ದತ್ತನ ಸಮರಸ ದರ್ಶನ ತತ್ತ್ವವನ್ನು ಧ್ಯಾನಿಸಿ, ಆ ಅನುಸಂಧಾನದ ಸೌಖ್ಯಾನುಭವವನ್ನು ಈ ಕೃತಿಯ ಮೂಲಕ ವ್ಯಾಖ್ಯಾನಮಾಡಿ ಶ್ರೀಗುರುಪಾದಕ್ಕೆ ಸಮರ್ಪಿಸಿದ್ದೇನೆ– ಶ್ರೀಗುರುದತ್ತ ಎಲ್ಲರಿಗೂ ಮಂಗಳವನ್ನುಂಟುಮಾಡಲಿ.

* * *

ರಾಜರ್ಷಿ ಶ್ರೀಜಯಚಾಮರಾಜೇಂದ್ರ ಒಡೆಯರ್ ದತ್ತ ದರ್ಶನದ ದಿವ್ಯಾನುಭವದ ಕಾಂತಿಧಾರೆಯ ಹೊಳಹು ಓದುಗರ ಮನದಲ್ಲೂ ಪ್ರತಿಫಲಿಸುತ್ತದೆ. ಅನುಭಾವದ ಉನ್ನತ ನೆಲೆಯಲ್ಲಿ ಅವರಿಗೆ ಸಿದ್ಧಿಸಿರುವ ಈ ಅದ್ವೈತಾನುಭೂತಿಯ ಚಿಂತನ ಒಂದು ಅಮೃತಸಿಂಚನ. ಅವರೇ ತಿಳಿಸಿರುವಂತೆ ಶ್ರೀ ದತ್ತನು ಅವರ ಅಂತರ್ಯದಲ್ಲಿ ಅವತರಿಸಿ, ಚಿಂತನೆಗಳನ್ನು ಉದ್ದೀಪಿಸಿ ಆದ ಅನುಭವ ಅಕ್ಷರರೂಪ ತಾಳುವಂತೆ ಮಾಡಿದ್ದಾನೆ. ಭಕ್ತಿಯಿಂದ ಆರ್ದ್ರವಾದ, ಜ್ಞಾನದಿಂದ ದೀಪ್ತವಾದ, ಅದ್ವೈತಾನುಭವದ ರಸಸಿದ್ಧಿಯಿಂದ ಇಡೀ ಕೃತಿಯೇ ಒಂದು ತೀರ್ಥ ಪ್ರಯಾಗವಾಗಿ ಓದುಗರ ಹೃದಯದಲ್ಲಿ ಅಮೃತ ಕುಂಭಮೇಳದ ಪುಣ್ಯಾನುಭವ ವನ್ನುಂಟು ಮಾಡುತ್ತದೆ.

ಮಹಾನುಭಾವರ ಅಂತರ್ಯದ ಪರಿಚಯ ಒಂದು ಪರಮಪುಣ್ಯ — ಅವರೊಂದಿಗೆ ನಡೆಯುವ ಆತ್ಮೀಯ ಸಂವಾದ ಒಂದು ಪರಮಭಾಗ್ಯ, ಅವರ ನಿರ್ಮಲ ಪ್ರೀತಿ ವಾತ್ಸಲ್ಯದ ಸ್ನೇಹಸ್ಪರ್ಶದ ಒಂದು ಹಾರೈಕೆ ಪರಮನಿಧಿ ಎಂದು ಜ್ಞಾನಿಗಳು ಹೇಳುತ್ತಾರೆ. ಅಂತಹ ಒಂದು ಅಪರೂಪದ ಅನು ಭವ ಈ ಕೃತಿಯಲ್ಲಾಗುತ್ತದೆ. ರಾಜರ್ಷಿಯ ನುಡಿಸಾನ್ನಿಧ್ಯ– ಭಾವಸಹಚರ್ಯ–ದರ್ಶನ ಸಹಯೋಗ ಶ್ರೀದತ್ತನ ಕೃಪಾ ವರ್ಷವೇ ಆಗಿ ಹರಿಯುತ್ತದೆ. ''ಗುರುಬ್ರಹ್ಮಾ–ಗುರುರ್ವಿಷ್ಣುಃ ಗುರುರ್ದೇವೋ ಮಹೇಶ್ವರಃ'' ಎಂಬ ಗುರುಸ್ತುತಿಯಂತೆ ಶ್ರೀದತ್ತ ಈ ಮೂರೂ ಸ್ವರೂಪದಲ್ಲಿ ತನ್ನ ಭಕ್ತರಿಗೆ ಹೊಸಜನ್ಮನೀಡುವ ಬ್ರಹ್ಮನಾಗುತ್ತಾನೆ, ಸಾಧಕನ ಅಂತಸ್ಸತ್ವದ ಪಾಲನೆ ಪೋಷಣೆಯ ನಿರ್ವಾಹಕ ವಿಷ್ಣುವಾಗುತ್ತಾನೆ. ಆತ್ಮಸಾಕ್ಷಾತ್ಕಾರಕ್ಕೆ ತಡೆಯಾಗುವ ಎಲ್ಲ ದೋಷರಾಶಿಯನ್ನು ನಾಶಮಾಡುವ ಈಶ್ವರನಾಗುತ್ತಾನೆ. ಮಾತೃಸ್ವರೂಪ, ಗುರುಸ್ವರೂಪ, ದೈವಸ್ವರೂಪದ ಸಂಗಮ ಮೂರ್ತಿ ಶ್ರೀದತ್ತ. ಆ ಪರಮಗುರು ಮಾನವಲೋಕಕ್ಕೆ ನೀಡಿರುವ ದ್ವೈತಾ ದ್ವೈತದ ಸಮರಸ ತತ್ತ್ವದಲ್ಲಿ ಪೂರ್ಣ ಸತ್ವವಿದೆ, ಸಾಧನಾನಿಷ್ಠೆ ಯಿಂದ ಅದು ನಮ್ಮ ಮನೋಧರ್ಮದ ಸ್ವತ್ವವಾಗಬೇಕಷ್ಟೆ!

ಮಾನವತೆಯನ್ನೂ ಮೀರಿದ ನೆಲೆ ದೈವತ್ವ, ದೈವತ್ವವನ್ನೂ ಮೀರಿದ ನೆಲೆ ಋಷಿತ್ವ. ಅಂತಹ ಋಷಿಸ್ವರೂಪ, ಋಷಿವಾಣಿ ಋಷಿಧಾಮವನ್ನು ತೋರಿ ದಾರಿಯೂ ಶ್ರೀದತ್ತನೇ ಗುರಿಯೂ ಶ್ರೀದತ್ತನೇ ಎಂಬ ಜ್ಞಾನೋದಯವನ್ನು ಭಕ್ತರಿಗೆ ನೀಡಿರುವ ರಾಜರ್ಷಿಗಳಿಗೆ ಭಕ್ತಿನಮನ.